## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಅನ್ನ ಎಂಬ ಶಬ್ದದ ಅರ್ಥವೇನು? | 2 |
| ಅನ್ನ ಎನ್ನುವದು ದೇವರ ಹೆಸರು | 3 |
| ಅಕ್ಕಿ ಬೆಂದಾಗ ಅನ್ನ | 5 |
| ಅನ್ನದ ಗುಣದೋಷಗಳು | 6 |
| ತಿನ್ನಬಹುದಾದ ಎಲ್ಲವೂ ಅನ್ನವೇ | 8 |
| ಅನ್ನ ಎಂದರೆ ಭೋಗ್ಯ ಎಂದೂ ಅರ್ಥವಿದೆ | 9 |

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ — 80

## ಅನ್ನ ಎಂಬ ಶಬ್ದದ ಅರ್ಥವೇನು?

**ಹರೇ ಶ್ರೀನಿವಾಸ.  ದಯವಿಟ್ಟು ಅನ್ನ ಪದದ ಅರ್ಥವನ್ನು ವಿವರಿ**

**— ರವೀಂದ್ರ ಬಿ. ಆರ್.**

ಅನ್ನ ಎನ್ನುವ ಶಬ್ದಕ್ಕೆ ಅನೇಕ ಅರ್ಥಗಳಿವೆ.

1. ಅನ್ನ ಎನ್ನುವದು ಶ್ರೀಹರಿಯ ಹೆಸರು.

2. ಅಕ್ಕಿಯನ್ನು ಬೇಯಿಸಿದಾಗ ನಿರ್ಮಾಣವಾಗುವ ಪದಾರ್ಥಕ್ಕೆ ಅನ್ನ ಎಂದು ಹೆಸರು.

3. ತಿನ್ನಬಹುದಾದ ಎಲ್ಲ ಪದಾರ್ಥವೂ ಅನ್ನ ಎಂದು ಕರೆಸಿಕೊಳ್ಳುತ್ತದೆ.

4. ನಾವು ಅನುಭವಿಸಬಹುದಾದ ಭೋಗ್ಯವಸ್ತುಗಳಿಗೆ ಅನ್ನ ಎಂದು ಹೆಸರು.

## ಅನ್ನ ಎನ್ನುವದು ದೇವರ ಹೆಸರು

ಯಜ್ಞಾಂತಕೃದ್ ಯಜ್ಞಗುಹ್ಯಂ
ಅನ್ನಂ ಅನ್ನಾದ ಏವ ಚ ಎಂದು
ವಿಷ್ಣುಸಹಸ್ರನಾಮದಲ್ಲಿ ಅನ್ನ ಎನ್ನುವದು
ಭಗವಂತನ ಹೆಸರು ಎಂದು ಪ್ರಸಿದ್ಧವಾಗಿದೆ.

ಅನ್ನ ಎನ್ನುವದು ಪರಮಾತ್ಮನ ಹೆಸರಾದಾಗ ಆ
ಶಬ್ದಕ್ಕೆ ಏನರ್ಥ ಎನ್ನುವದನ್ನು ತೈತ್ತೀರಿಯ
ಉಪನಿಷತ್ತು ಹೀಗೆ ವಿವರಿಸುತ್ತದೆ —

**ಅದ್ಯತೇ ಅತ್ತಿ ಚ ಭೂತಾನಿ.**
**ತಸ್ಮಾದನ್ನಂ ತದುಚ್ಯತೇ ಇತಿ। ಎಂದು.**

ಶ್ರೀಮದಾಚಾರ್ಯರು ಉಪನಿಷತ್ತಿನ
ಅಭಿಪ್ರಾಯವನ್ನು ಸುಸ್ಪಷ್ಟವಾಗಿ ತಿಳಿಸುತ್ತಾರೆ.

**ಅತ್ತೃತ್ವಾತ್ ಸರ್ವಲೋಕಾನಾಂ**
**ಅನ್ನಮಿತ್ಯುಚ್ಯತೇ ಬುಧೈಃ।**
**ಉಪಜೀವ್ಯಶ್ಚ ಭೂತಾನಾಂ**
**ಇತಿ ವಾನ್ನಂ ಜನಾರ್ದನಃ ।**

**ಅದ್ಯತೇ ಇತಿ ಅನ್ನಮ್ ।** ಭಗವಂತ ಎಲ್ಲರಿಗೂ ಉಪಜೀವ್ಯನಾಗಿದ್ದಾನೆ, ಅಂದರೆ ಜಗತ್ತಿನ ಸಕಲ ಚರಾಚರಪದಾರ್ಥಗಳೂ ತಮ್ಮ ಅಸ್ತಿತ್ವದಿಂದ ಆರಂಭಿಸಿ ಎಲ್ಲದಕ್ಕೂ ಶ್ರೀಹರಿಯನ್ನೇ ಆಶ್ರಿಯಿಸಿವೆಯಾದ್ದರಿಂದ ಪರಮಾತ್ಮನಿಗೆ ಅನ್ನ ಎಂದು ಹೆಸರು.

**ಅತ್ತಿ ಇತಿ ಅನ್ನಮ್ ।** ಎಲ್ಲವನ್ನೂ ತಿನ್ನುತ್ತಾನೆ, ಅರ್ಥಾತ್ ಪ್ರಲಯಕಾಲದಲ್ಲಿ ಎಲ್ಲವನ್ನೂ ಕೊಂದು ತನ್ನ ಉದರಕ್ಕೆ ಸೇರಿಸುತ್ತಾನೆಯಾದ್ದರಿಂದ ಪರಮಾತ್ಮನಿಗೆ ಅನ್ನ ಎಂದು ಹೆಸರು.

## ಅಕ್ಕಿ ಬೆಂದಾಗ ಅನ್ನ

ಇನ್ನು ಆಹಾರದ ಅನ್ನದ ಕುರಿತು ವಿಚಾರ ಮಾಡೋಣ.

ಅಕ್ಕಿಯನ್ನು ಬೇಯಿಸಿದಾಗ ನಿರ್ಮಾಣವಾಗುವ ಪದಾರ್ಥಕ್ಕೆ ನಾವು ಅನ್ನ ಎನ್ನುತ್ತೇವೆ.

ಮತ್ತು ಅನ್ನ ಎನ್ನುವದು ಪ್ರತ್ಯೇಕ ಧಾನ್ಯವಲ್ಲ, ಧಾನ್ಯ ಒಂದು ವಿಶಿಷ್ಟ ಅವಸ್ಥೆಯನ್ನು ಮುಟ್ಟಿದಾಗ ಅನ್ನ ಎಂದು ಕರೆಸಿಕೊಳ್ಳುತ್ತದೆ ಎಂದು ವಸಿಷ್ಠರು ತಿಳಿಸುತ್ತಾರೆ —

> **ಸಸ್ಯಂ ಕ್ಷೇತ್ರಗತಂ ಪ್ರೋಕ್ತಂ**
> **ಸತುಷಂ ಧಾನ್ಯಮುಚ್ಯತೇ**
> **ಆಮಂ ತು ವಿತುಷಂ ಜ್ಞೇಯಂ**
> **ಸ್ವಿನ್ನಮನ್ನಮುದಾಹೃತಮ್** ಎಂದು.

ಬಿತ್ತದೇ ಇದ್ದಾಗ ಬೀಜ.

ಬಿತ್ತಿ ಮೊಳಕೆಯೊಡೆದ ಮೇಲೆ ಸಸ್ಯ.

ಹೊಲದಿಂದ ತೆಗೆದು, ಇನ್ನೂ ಊಬು ಇದ್ದಾಗ ಧಾನ್ಯ[1].

ಊಬು ತೆಗೆದಾಗ ಆಮ.

ಆಮವನ್ನು ಬೇಯಿಸಿದಾಗ ಅನ್ನ.

## ಅನ್ನದ ಗುಣದೋಷಗಳು

ಅಕ್ಕಿಯನ್ನು ಬೇಯಿಸಿದಾಗ ಆಗುವ ಅನ್ನದಿಂದ ಉಂಟಾಗುವ ಪರಿಣಾಮಗಳನ್ನು ಆಯುರ್ವೇದ ಹೀಗೆ ಸಂಗ್ರಹಿಸುತ್ತದೆ —

ಬುದ್ಧಿಯ ಅಭಿವೃದ್ಧಿ.

ಗಂಡಸರಲ್ಲಿ ವೀರ್ಯದ ಅಭಿವೃದ್ಧಿ, ಸ್ತ್ರೀಯರಲ್ಲಿ ಶುಕ್ರದ ಅಭಿವೃದ್ಧಿ.

ದೇಹ ಪುಷ್ಟವಾಗುತ್ತದೆ.

---

[1] ಭತ್ತದಲ್ಲಿ ಎರಡು ಅಂಶವಿರುತ್ತದೆ. ಒಳಗಿನ ಅಕ್ಕಿ. ಅದರ ಮೇಲೆ ಸಿಪ್ಪೆಯಂತಹ ಪದಾರ್ಥ. ಅದನ್ನೇ ಊಬು ಎನ್ನುವದು.

ಕಣ್ಣು ಮೊದಲಾದ ಇಂದ್ರಿಯಗಳು ಚುರುಕಾಗುತ್ತವೆ.

ದೇಹ ದಪ್ಪಗಾಗುತ್ತದೆ.

ಹಸಿವನ್ನು ನೀಗಿಸುತ್ತದೆ.

ಶ್ರಮ ಪರಿಹಾರವಾಗುತ್ತದೆ.

ಸಣಕಲಾಗಿರುವವರು ದಪ್ಪವಾಗುತ್ತಾರೆ.

ಕ್ಷಯರೋಗಕ್ಕೆ ಅನ್ನ ಉತ್ತಮ ಮದ್ದು.

ತುಂಬ ಬಿಸಿಬಿಸಿಯಾದ ಅನ್ನವನ್ನು ತಿಂದರೆ ಶಕ್ತಿಹ್ರಾಸವಾಗುತ್ತದೆ. ದುರ್ಬಲರಾಗುತ್ತೇವೆ.

ತುಂಬ ಮುದ್ದೆಯಾದ ಅನ್ನವನ್ನು ತಿಂದರೆ ದೇಹದ ಉತ್ಸಾಹ ತಗ್ಗುತ್ತದೆ.

ಹಿಂದಿನ ದಿವಸ ಮಾಡಿದ ಅನ್ನವನ್ನು ಇಂದು ತಿಂದರೆ ಮೆದುಳಿನ ಕಾರ್ಯ ತುಂಬ ಕಡಿಮೆಯಾಗುತ್ತದೆ. ನೆನಪಿನ ಶಕ್ತಿ ಕುಗ್ಗುತ್ತದೆ. ಬುದ್ಧಿಮಾಂದ್ಯ ಉಂಟಾಗುತ್ತದೆ.

## ತಿನ್ನಬಹುದಾದ ಎಲ್ಲವೂ ಅನ್ನವೇ

ಶಾಸ್ತ್ರದ ದೃಷ್ಟಿಯಲ್ಲಿ ನಾವು ತಿನ್ನುವ ಎಲ್ಲ ಪದಾರ್ಥವೂ ಅನ್ನ ಎಂದೇ ಕರೆಸಿಕೊಳ್ಳುತ್ತದೆ. ಅದ್ಯತೇ, ಯಾವುದು ತಿನ್ನಲ್ಪಡುತ್ತದೆಯೋ ಅದು ಅನ್ನ ಎಂಬ ಅರ್ಥದಲ್ಲಿ.

ಅದಕ್ಕಾಗಿಯೇ ಅನ್ನದಾನ ಎಂಬಲ್ಲಿ ಕೇವಲ ಅಕ್ಕಿಯಿಂದ ಅನ್ನ ಮಾಡಿಸಿ ಬಡಿಸುವದಲ್ಲ. ವ್ಯಂಜನ, ಭಕ್ಷ್ಯ, ಭೋಜ್ಯ ಎಲ್ಲವನ್ನೂ ಮಾಡಿಸಿ ಸಮರ್ಪಿಸುವದೇ ಅನ್ನದಾನ. ಹೀಗಾಗಿ ಅನ್ನ ಎನ್ನುವ ಶಬ್ದಕ್ಕೆ ತಿನ್ನಲ್ಪಡುವ ಸಕಲ ಪದಾರ್ಥಗಳು ಎಂದರ್ಥ.  ಅದಕ್ಕಾಗಿಯೇ

**“ಅನ್ನಮಾಶ್ರಿತ್ಯ ಪಾಪಾನಿ ತಿಷ್ಠಂತಿ ಹರಿವಾಸರೇ”**

ಎಂದು ಏಕಾದಶಿಯಲ್ಲಿ ಎಲ್ಲ ಪಾಪಗಳೂ ಅನ್ನವನ್ನು ಆಶ್ರಯಿಸಿ ಕುಳಿತಿರುತ್ತವೆ ಎಂದು ಹೇಳಲಾಗಿದೆ. ಇಲ್ಲಿ ಕೇವಲ ಅಕ್ಕಿಯಿಂದ ಮಾಡಿದ ಅನ್ನ ಎಂದಲ್ಲ. ತಿನ್ನಬಹುದಾದ ಯಾವುದೇ ಪದಾರ್ಥವನ್ನೂ ಅನ್ನ ಎಂದೇ ಕರೆಯುವದು.

## ಅನ್ನ ಎಂದರೆ ಭೋಗ್ಯ ಎಂದೂ ಅರ್ಥವಿದೆ

ಅನ್ನ ಎನ್ನುವ ಶಬ್ದಕ್ಕೆ ಭೋಗಿಸಲ್ಪಡುವ ವಸ್ತು ಎಂದೂ ಅರ್ಥವಿದೆ.

ಯಾವುದರ ಮೇಲೆ ನಾವು ಅಧಿಕಾರವನ್ನು ನಡೆಸಬಹುದೋ, ಯಾವುದರ ಉಪಯೋಗವನ್ನು ನಾವು ಪಡೆಯುತ್ತೇವೆಯೋ ಆ ವಸ್ತುವನ್ನೂ ಅನ್ನ ಎಂದು ಕರೆಯಬಹುದು.

"ಪರಮಾತ್ಮ ನನ್ನ ಮೇಲೆ ಅಧಿಕಾರ ಹೊಂದಿದ್ದಾನೆ, ಅದಕ್ಕಾಗಿ ನಾನು ಪರಮಾತ್ಮನಿಗೆ ಅನ್ನ, ನಾನು ಇಡಿಯ ಜಗತ್ತಿನ ಮೇಲೆ ಅಧಿಕಾರ ಹೊಂದಿದ್ದೇನೆ ಅದಕ್ಕಾಗಿ ಜಗತ್ತು ನನಗೆ ಅನ್ನ" ಎಂದು ಬ್ರಹ್ಮದೇವರು ಹೇಳುತ್ತಾರೆ — **ಅಹಮನ್ನಮ್ । ಅಹಮನ್ನಾದಃ। ಎಂದು.**

ರಾಜನಿಗೆ ಭೋಗ್ಯರಾದ್ದರಿಂದ ಅವನ ಅಂತಃಪುರದ ಸ್ತ್ರೀಯರು ರಾಜನಿಗೆ ಅನ್ನ.

ವೈಶ್ಯರು ಸಂಪಾದಿಸಿದ ಹಣವನ್ನು ರಾಜ ಕರವನ್ನಾಗಿ ಸ್ವೀಕರಿಸುತ್ತಾನೆಯಾದ್ದರಿಂದ ವೈಶ್ಯರು ರಾಜನಿಗೆ ಅನ್ನ.

ಕುದುರೆ, ಆನೆ, ಮುಂತಾದ ಪಶುಗಳು, ಸೈನ್ಯ ರಾಜನ ವೈಭವ, ರಕ್ಷಣೆಗಾಗಿ ಇವೆಯಾದ್ದರಿಂದ ಅವು ರಾಜನ ಅನ್ನ ಎಂದು ಸ್ವಾಯಂಭುವ ಮನು ತಿಳಿಸುತ್ತಾರೆ.

**“ಸ್ತ್ರಿಯೋಽನ್ನಂ ಪಶವೋಽನ್ನಂ ಚ ವಿಶೋಽನ್ನಂ ಚ ಮಹೀಕ್ಷಿತಾಮ್”  ಎಂದು.**

ವೇದಗಳಲ್ಲೇನು ನಾವು ವ್ಯಾಪಕವಾಗಿ ಅನ್ನದ ಪ್ರಾರ್ಥನೆಯನ್ನು ಕೇಳುತ್ತೇವೆ, ಇದೇ ಅರ್ಥದಲ್ಲ. ನಾವು ಅನುಭವಿಸಬಹುದಾದ ಭೋಗ್ಯಪದಾರ್ಥಗಳನ್ನು ನೀಡು ಎಂದು ಅದರರ್ಥ.

— ವಿಷ್ಣುದಾಸ ನಾಗೇಂದ್ರಾಚಾರ್ಯ